# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **634**

ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 13. 12. 2024.

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೋಲಾರ ಜಿಲ್ಲೆಯಲ್ಲಿ ನಕಲಿ ಗೊಬ್ಬರ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು; ಕಳೆದ 03 ವರ್ಷದಿಂದ ಇಲ್ಲಿಯವರೆಗೂ ಇಲಾಖೆಗೆ ರೈತರಿಂದ ಎಷ್ಟು ದೂರುಗಳು ಬಂದಿದೆ; | ಕೋಲಾರ ಜಿಲ್ಲೆಯಲ್ಲಿ ನಕಲಿ ಗೊಬ್ಬರ ಮಾರಾಟ ಮಾಡುತ್ತಿರುವ ಒಂದು ಪ್ರಕರಣ 2022-23 ನೇ ಸಾಲಿನಲ್ಲಿ ವರದಿಯಾಗಿರುತ್ತದೆ.<br>ಮೆ. ಕಮಲ್ ಟ್ರೇಡರ್ಸ್, ಮುಳಬಾಗಿಲು ತಾಲ್ಲೂಕಿನ ರಸಗೊಬ್ಬರ ಮಾರಾಟ ಮಳಿಗೆಯಲ್ಲಿ, 50 ಕೆ.ಜಿ ನಕಲಿ DAP ರಸಗೊಬ್ಬರವನ್ನು MCF Ltd ತಯಾರಕ ಸಂಸ್ಥೆಯ ಲೇಬಲ್ ಇದ್ದ ಚೀಲದಲ್ಲಿ ಅನುಕರಣೆ ಮಾಡಿ ಮಾರಾಟ ಮಾಡಿರುವ ಪ್ರಕರಣ ಕಂಡುಬಂದಿರುತ್ತದೆ.<br>ಈ ಪ್ರಕರಣದಲ್ಲಿ ರಸಗೊಬ್ಬರ ಮಾರಾಟ ಮಳಿಗೆಯ ಪರವಾನಗಿಯನ್ನು ರದ್ದುಪಡಿಸಿ, ಮಾರಾಟ ಮಳಿಗೆಯ ಮಾಲೀಕರ ವಿರುದ್ಧ ಮುಳಬಾಗಿಲು ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ (78/2022) ದಾಖಲಿಸಲಾಗಿರುತ್ತದೆ. ಮುಂದುವರೆದು, ಸದರಿ ಪ್ರಕರಣವನ್ನು ಸಿ.ಐ.ಡಿ ಸಂಸ್ಥೆಗೆ ವಹಿಸಲಾಗಿರುತ್ತದೆ. |
| (ಆ) | ನಕಲಿ ಗೊಬ್ಬರ ಮಾರಾಟ ಮಾಡಿದ ಪರಿಣಾಮ ಟೊಮ್ಯಾಟೊ ಬೆಳೆಯನ್ನು ಒಳಗೊಂಡಂತೆ ಹಲವಾರು ಬೆಳೆಗಳು ಹಾನಿಯಾಗಿರುವುದರಿಂದ ರೈತರಿಗೆ ಲಕ್ಷಾಂತರ ರೂ. ನಷ್ಟವುಂಟಾಗಿದ್ದು, ಇದಕ್ಕೆ ಪರಿಹಾರ ನೀಡಲು ಸರ್ಕಾರ ಯಾವುದಾದರೂ ಕ್ರಮ ತೆಗೆದುಕೊಂಡಿದೆಯೇ; ಹಾಗೂ ಇಲಾಖೆಯ ವತಿಯಿಂದ ಜಿಲ್ಲೆಯಲ್ಲಿ ಎಷ್ಟು ಅಂಗಡಿ ಮೇಲೆ ದಾಳಿ ಮಾಡಿ ಕ್ರಮ ಕೈಗೊಳ್ಳಲಾಗಿದೆ; | ನಕಲಿ ಗೊಬ್ಬರ ಮಾರಾಟ ಮಾಡಿದ ಪರಿಣಾಮ ಬೆಳೆಗಳಿಗೆ ಹಾನಿಯಾಗಿರುವ ಬಗ್ಗೆ ಕೃಷಿ ಇಲಾಖೆಗೆ ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ.<br>ಇಲಾಖಾ ವತಿಯಿಂದ ಪ್ರಸಕ್ತ ಸಾಲಿನಲ್ಲಿ, 2 ರಸಗೊಬ್ಬರ ಮಾರಾಟ ಮಳಿಗೆಗಳ ಮೇಲೆ ದಾಳಿ ಮಾಡಿ, ರಸಗೊಬ್ಬರ (ನಿರವಯವ, ಸಾವಯವ ಅಥವಾ ಮಿಶ್ರಿತ) (ನಿಯಂತ್ರಣ) ಆದೇಶ, 1985 ರನ್ವಯ ಕ್ರಮಬದ್ಧವಲ್ಲದ ದಾಸ್ತಾನನ್ನು ಜಪ್ತು ಮಾಡಲಾಗಿರುತ್ತದೆ<br>1. ಮೆ. ವೆಂಕಟಾದ್ರಿ ಟ್ರೇಡರ್ಸ್, ಮುಳಬಾಗಿಲು ಇಲ್ಲಿ, 300 ಲೀ Humic Acid ಮತ್ತು<br>2. ಮೆ. ಕೊಪ್ಪರಂ ಟ್ರೇಡರ್ಸ್, ಮುಳಬಾಗಿಲು ಇಲ್ಲಿ 323 ಲೀ Alwin Gel ಹಾಗೂ 7ಲೀ Liquid fertilizer 17:17:17 ದಾಸ್ತಾನನ್ನು ಜಪ್ತಿ ಮಾಡಲಾಗಿರುತ್ತದೆ. |

| | | |
|---|---|---|
| | | ಮುಂದುವರೆದು, ಪ್ರಸಕ್ತ ಸಾಲಿನಲ್ಲಿ, 93 ರಸಗೊಬ್ಬರ ಮಾರಾಟ ಮಳಿಗೆಗಳ ತಪಾಸಣೆ ಕೈಗೊಂಡು ಒಟ್ಟು 219 ರಸಗೊಬ್ಬರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿದ್ದು, ಈ ಪೈಕಿ ಎರಡು ರಸಗೊಬ್ಬರ ಮಾದರಿಗಳು ಕಳಪೆ ಎಂದು ವರದಿಯಾಗಿದ್ದು, ಈ 2 ರಸಗೊಬ್ಬರ ಮಾರಾಟಗಾರರ ವಿರುದ್ಧ, ರಸಗೊಬ್ಬರ (ನಿರವಯವ, ಸಾವಯವ ಅಥವಾ ಮಿಶ್ರಿತ) (ನಿಯಂತ್ರಣ) ಆದೇಶ, 1985 ರನ್ವಯ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ. |
| (ಇ) | ರೈತರೊಬ್ಬರು ನೀಡಿದ ದೂರಿನನ್ವಯ ಬೆಂಗಳೂರಿನ ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿದ್ದು, ವರದಿಯಲ್ಲಿ ನಕಲಿ ಗೊಬ್ಬರವೆಂಬುದು ಸಾಭೀತಾಗಿದ್ದರೂ ಇದುವರೆಗೂ ಅಧಿಕಾರಿಗಳು ಕ್ರಮ ಕೈಗೊಳ್ಳದಿರಲು ಕಾರಣವೇನು? | ಮುಳಬಾಗಿಲು ತಾಲ್ಲೂಕಿನ ಮೆ. ವೆಂಕಟಾದ್ರಿ ಟ್ರೇಡರ್ಸ್ ರವರಿಂದ ರೈತರು ಖರೀದಿಸಿದ್ದ, Potash Derived from Molasses (PDM) ರಸಗೊಬ್ಬರ ಕಳಪೆ ಇರುವುದಾಗಿ, ಸಹಾಯಕ ಕೃಷಿ ನಿರ್ದೇಶಕರು, ಮುಳಬಾಗಿಲು ತಾಲ್ಲೂಕು ರವರಿಗೆ ದೂರು ನೀಡಿದ ಹಿನ್ನಲೆಯಲ್ಲಿ, ರಸಗೊಬ್ಬರ ಮಾರಾಟ ಮಳಿಗೆಗೆ ಭೇಟಿ ನೀಡಿ ಪರಿಶೀಲಿಸಿದಾಗ ಸದರಿ Potash Derived from Molasses (PDM) ರಸಗೊಬ್ಬರ ಮಾರಾಟ ಮಳಿಗೆಯಲ್ಲಿ ದಾಸ್ತಾನು ಇಲ್ಲದಿದ್ದ ಕಾರಣ, ರೈತರ ಬಳಿ ಇದ್ದ ರಸಗೊಬ್ಬರದ ಚೀಲದಿಂದ ಮಾದರಿಯನ್ನು ಸಂಗ್ರಹಿಸಿ, ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ, ಬೆಂಗಳೂರಿಗೆ ವಿಶ್ಲೇಷಣೆಗಾಗಿ ಸಲ್ಲಿಸಲಾಗಿತ್ತು. ದಿನಾಂಕ: 05.09.2024 ರ ಸದರಿ ಪ್ರಯೋಗಾಲಯದ ವರದಿಯಂತೆ ಸದರಿ ಮಾದರಿಯು ಕಳಪೆ ಎಂದು ಕಂಡು ಬಂದಿರುತ್ತದೆ.<br>ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಮಾರಾಟಗಾರರಿಗೆ ಹಾಗೂ ಉತ್ಪಾದಕರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿದ್ದು, ರಸಗೊಬ್ಬರ (ನಿರವಯವ, ಸಾವಯವ ಅಥವಾ ಮಿಶ್ರಿತ) (ನಿಯಂತ್ರಣ) ಆದೇಶ, 1985 ಹಾಗೂ ಅಗತ್ಯ ವಸ್ತುಗಳ ಕಾಯ್ದೆ, 1955 ರನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ . |

ಸಂಖ್ಯೆ:AGRI/323/ACT/2024

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು